





ಕಣ್ತುಂಬಿಕೊಂಡ ಎಲ್ಲರೊಳಗೂ ಮಧುರ ನೆನಪಿನ ಬುತ್ತಿಯೊಂದನ್ನು ಇಡುತ್ತದೆ ಎಂಬ ಕೌತುಕಕ್ಕೆ ಅಲ್ಲಿದ್ದ ಅಷ್ಟೂ ಹೊತ್ತು ಪುರಾವೆ ದೊರೆಯಲಾರಂಭಿಸಿತು.

ಪ್ರವಾಸ ಮನಸ್ಸಿನ ಮಧುರ ಅನುಭೂತಿ. ಅದನ್ನು ತಮ್ಮ ಮೊಬೈಲಿನ ಕ್ಯಾಮೆರಾದಲ್ಲಿ ಸೆರೆ ಹಿಡಿದರಷ್ಟೇ ಇಲ್ಲಿಗೆ ಬಂದದ್ದು ಸಾರ್ಥಕ ಎಂದುಕೊಂಡವರೆಲ್ಲ, ಸೆಲ್ಫಿ ತೆಗೆಯಲು ಇನ್ನಿಲ್ಲದ ಉಮೇದು ತೋರುತ್ತಿದ್ದರು. ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದ ಒಬ್ಬನ ಮೊಬೈಲು ಕೈ ಜಾರಿ ನೀರು ಪಾಲಾಯಿತು. 'ಅಯ್ಯೋ ನನ್ ಮೊಬೈಲು...' ಅಂತ ಪೇಚಾಡಲು ಆರಂಭಿಸಿದವನ ನೋವು ಕಂಡು ಮರುಗಿದ ಲೈಫ್‌ಗಾರ್ಡ್‌ಗಳು ನೀರಿಗಿಳಿದು ತಡಕಾಡಿ, ಸಮುದ್ರ ಸ್ನಾನ ಮಾಡಿದ ಮೊಬೈಲನ್ನು ಹುಡುಕಿ ಅವನ ಕೈಗಿಟ್ಟರು. ಹ್ಯಾಂಡ್‌ಸೆಟ್ಟು ಹಾಳಾದರೂ, ಅದರೊಳಗಿನ ಸಿಮ್ಮು ಮೆಮೋರಿ ಕಾರ್ಡಿಗೆ ಏನೂ ಆಗಿರುವುದಿಲ್ಲವೆಂಬುದು ಖಾತ್ರಿಯಾಗಿ ಅವನು ನಿಟ್ಟುಸಿರುಬಿಟ್ಟ.

ಅದುವರೆಗೂ ಕಣ್ಮನ ಸೆಳೆಯುವ ದೃಶ್ಯಗಳನ್ನೇ ಕಣ್ಣೆದುರು ಕಟ್ಟಿಕೊಡುತ್ತಿದ್ದ ಸೇಂಟ್ ಮೇರೀಸ್ ದ್ವೀಪ, ವರ್ತಮಾನದ ಬದುಕಿನ ಸರಳವೆಂಬಂತೆ ತೋರುವ ಸಂಕೀರ್ಣ ಆಯಾಮವೊಂದನ್ನು ಪರಿಚಯಿಸಿತು. ಅತ್ತಲಿಂದ ಕರೆದುಕೊಂಡು ಬಂದಿದ್ದ ಬೋಟು ಮತ್ತೆ ಮಲ್ಪೆ ಬಂದರಿಗೆ ತಂದಿಳಿಸಿತು. ಮಲ್ಪೆ ಬಂದರು, ಸೇಂಟ್ ಮೇರೀಸ್ ಐಲ್ಯಾಂಡ್‌ನಲ್ಲಿ ದಿನದ ಬಹುಭಾಗ ಕಳೆದಿದ್ದ ನಾವು, ಮಲ್ಪೆ ಬೀಚಿನಲ್ಲಿ ಸೂರ್ಯಾಸ್ತ ನೋಡಿದ ನಂತರವೇ ಮಲ್ಪೆಗೆ ವಿದಾಯ ಹೇಳುವುದೆಂದು ನಿರ್ಧರಿಸಿದೆವು.

ಹಿಂದಿನ ದಿನದ ತಿರುಗಾಟದ ವೇಳೆ ಕಂಡಿದ್ದ ಬೀಚುಗಳು ಕಟ್ಟಿಕೊಟ್ಟಿದ್ದ ದೃಶ್ಯಗಳು ಮತ್ತೆ ಪುನರಾವರ್ತನೆ ಆಗತೊಡಗಿದವು. ಸುಮ್ಮನೆ ಸುತ್ತಾಡುವುದು ಬೇಡವೆನಿಸಿ, ಬೀಚಿನೆದುರು ಹಾಕಿದ್ದ ಕಾಂಕ್ರೀಟು ಬೆಂಚಿನ ಮೇಲೆ ಕುಳಿತು ಸೂರ್ಯ ಸಮುದ್ರದಲ್ಲಿ ಮುಳುಗುವುದಾದರೂ ಹೇಗೆಂದು ಅರಿಯಲು ಅತ್ತ ದಿಟ್ಟಿಸತೊಡಗಿದೆ. ಪಕ್ಕದ ಬೆಂಚಿನ ಮೇಲೆ ನನ್ನ ಹಾಗೆಯೇ ಏಕಾಂಗಿ–ಯಾಗಿ ಕುಳಿತು ಸೂರ್ಯಾಸ್ತ ಗಮನಿಸುತ್ತಿದ್ದ ಅಜ್ಜಿ, ಮುಳುಗುತ್ತಿರುವ ಸೂರ್ಯನಿಗಿಂತ ಹೆಚ್ಚು ಕಾಡತೊಡಗಿದರು. ಅಸಲಿಗೂ ಮುಳುಗದ, ಮುಳುಗಿ ಸಾಯದ ಸೂರ್ಯನೆದುರು ಕುಳಿತು ಮುಳುಗುತ್ತಿರುವ, ಮತ್ತೆಂದೂ ಉದಯಿಸದ ತಮ್ಮ ಬದುಕಿನ ಪ್ರತಿಬಿಂಬವನ್ನೇ ಅವರು ದಿಟ್ಟಿಸುತ್ತಿರುವಂತೆ ಭಾಸವಾಯಿತು.